ಓ.ಎಸ್. ನಂಃ 40/2018

ಪಿ.ಡಬ್ಲ್ಯೂಃ 2

**ದಿನಾಂಕ 16.07.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎ.ಪಿ. ವಕೀಲರಿಂದಃ**

1. ನಾನು ಮತ್ತು ವಾದಿ ಸಂಬಂಧಿಕರಲ್ಲ ಆದರೆ ಒಂದೇ ಊರಿನವರು. ನಾನು ಮತ್ತು ವಾದಿ ಅನೋನ್ಯವಾಗಿದ್ದೇವೆ ಎಂದರೆ ಸರಿ. ನಾನು ಮತ್ತು ವಾದಿ ಅನೋನ್ಯವಾಗಿರುದರಿಂದ ನಿಪಿ.1 ಕ್ಕೆ ಸಾಕ್ಷಿದಾರನಾಗಿ ಸಹಿಯನ್ನು ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿದಾರರಾದ ಬೋರನಾಯಕರವರು ಸಹ ನಿಪಿ.1 ಕ್ಕೆ ಸಹಿ ಮಾಡಿರುತ್ತಾರೆ. ಸದರಿ ಬೋರನಾಯಕರವರು ವಾದಿಯ ಪರಿಚಯಸ್ಥರು.

2. ನಾನು ಪ್ರತಿವಾದಿಯನ್ನು ಮೊದಲಬಾರಿಗೆ ಹಂಪಾಪುರದಲ್ಲಿ ನೋಡಿರುತ್ತೇನೆ. ನನಗೆ ಪ್ರತಿವಾದಿಯ ತಂದೆಯ ಹೆಸರು ಗೊತ್ತಿಲ್ಲ. ಪ್ರತಿವಾದಿಗೆ ಅಂದಾಜು 40 ರಿಂದ 45 ವರ್ಷಗಳ ವರೆಗೆ ವಯಸ್ಸಾಗಿರಬಹುದು. ಪ್ರತಿವಾದಿಯು ಹಂಪಾಪುರದಲ್ಲಿ ವಾಸವಿದ್ದರು. 2016 ರಿಂದ 2021 ರವರೆಗೆ ಪ್ರತಿವಾದಿಯು ಕುಟುಂಬ ಸಮೇತ ಬೆಂಗಳೂರಿನಲ್ಲಿ ನೆಲೆಸಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದಿನಾಂಕ 02.02.2015 ರಂದು ವಾದಿ ಮತ್ತು ಪ್ರತಿವಾದಿಯ ಮಧ್ಯ ಹಣದ ವ್ಯವಹಾರವಾಗಿರುತ್ತದೆ.

3. ನಿಪಿ.1 ರ ಛಾಪಾ ಕಾಗದವನ್ನು ಯಾರು ತಂದಿರುತ್ತಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಯಾರು ಸಾಲವನ್ನು ಪಡೆದಿರುತ್ತಾರೋ ಅವರೇ ಛಾಪಾ ಕಾಗದವನ್ನು ತಂದಿರುತ್ತಾರೆ ಎಂದು ನುಡಿದಿರುತ್ತಾರೆ. ವಾದಿ ನನ್ನನ್ನು ನಿಪಿ.1 ಕ್ಕೆ ಸಹಿ ಮಾಡಲು ಹೇಳಿದ ಕಾರಣ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ನಿಪಿ.1 ರ ದಾಖಲೆಯನ್ನು ಬರೆದಾಗ ಪ್ರತಿವಾದಿ ಅಲ್ಲಿ ಹಾಜರಿರಲಿಲ್ಲ ಎಂದರೆ ಸರಿಯಲ್ಲ.

4. ನಾನು ಕೆ ಆರ್ ನಗರ ತಾಲ್ಲೂಕು ಕಚೇರಿಯ ಮುಂದೆ ನಿಪಿ.1 ಕ್ಕೆ ನನ್ನ ಸಹಿಯನ್ನು ಹಾಕಿರುತ್ತೇನೆ. ನಿಪಿ.1 ರ ದಾಖಲೆಯನ್ನು ತಾಯಾರಿಸುವಾಗ ನಾನು, ವಾದಿ ಮತ್ತು ಪ್ರತಿವಾದಿ ಹಾಜರಿದ್ದೇವು. ನಿಪಿ.1 ರ ದಾಖಲೆಯನ್ನು ತಯಾರಿಸುವಾಗ ಬೋರನಾಯಕರು ಸಹ ಹಾಜರಿದ್ದು, ಅವರ ತಮ್ಮ ಸಹಿಯನ್ನು ನಿಪಿ.1 ಕ್ಕೆ

ಹಾಕಿರುತ್ತಾರೆ. ನಾನು ನನ್ನ ಎರಡು ಸಹಿಯನ್ನು ನಿಪಿ.1 ಕ್ಕೆ ಹಾಕಿರುತ್ತೇನೆ. ನಿಪಿ.1 ರ ಛಾಪಾ ಕಾಗದವು ಎಷ್ಟು ರೂಪಾಯಿ ಮುಖಬೆಲೆಯ ಛಾಪಾ ಕಾಗದವಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ.

5. ಹಣದ ವ್ಯವಹಾರ ಆದ ಸಮಯವನ್ನು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. 100 ರೂಪಾಯಿ ಮುಖಬೆಲೆಯ ಹಣ ನೋಟುಗಳನ್ನು ವಾದಿ ಪ್ರತಿವಾದಿಗೆ ನೀಡಿರುತ್ತಾರೆ. ದಿನಾಂಕ 02.02.2015 ರಂದು ವಾದಿ ಮತ್ತು ಪ್ರತಿವಾದಿಯ ಮಧ್ಯೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಮತ್ತು ನಿಪಿ.1 ರ ಸಾಕ್ಷಿದಾರರಾದ ಬೋರನಾಯಕರವರ ಮಧ್ಯ ನಡೆದ ಹಣದ ವ್ಯವಹಾರದ ಭದ್ರತೆಗಾಗಿ ಸದರಿ ಬೋರನಾಯಕರವರು ನಿಪಿ.1 ರ ಪ್ರೊನೋಟನ್ನು ಪಡೆದಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಯು ಬೋರನಾಯಕರವರಿಗೆ ಭದ್ರತೆಗಾಗಿ ಕೊಟ್ಟಿದ್ದ ನಿಪಿ.1 ರ ಪ್ರೊನೋಟ್ ನ್ನು ದುರುಪಯೋಗಪಡಿಸಿಕೊಂಡು ವಾದಿ ಈ ಸುಳ್ಳು ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮದಲ್ಲಿ ವಾದಿ ಮತ್ತು ಪ್ರತಿವಾದಿಯ ಮಧ್ಯಯಾವುದೇ ವ್ಯವಹಾರ ನಡೆಯದಿದ್ದರು ಸಹ ವಾದಿ ನನ್ನ ಆಪ್ತನಾಗಿರುವುದರಿಂದ ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. ನನ್ನ ವಿಳಾಸವನ್ನು ಮತ್ತು ತಂದೆಯ ಹೆಸರಿನ್ನು ನಿಪಿ.1 ರಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ. ಖಾಲಿ ಛಾಪಾ ಕಾಗದವನ್ನು ದುರುಪಯೋಗಪಡಿಸಿಕೊಂಡು ನಿಪಿ.1 ರ ದಾಖಲೆಯನ್ನು ವಾದಿಯು ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರು ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**